**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.154/2023**

ಸಾಕ್ಷಿದಾರರ ಹೆಸರು : ನೇತ್ರಾ

ಗಂಡನ ಹೆಸರು : ಹನುಮಂತಪ್ಪ

ವಯಸ್ಸು : 32 ವರ್ಷ

ಉದ್ಯೋಗ : ಗೃಹಿಣಿ

ವಾಸ ಸ್ಥಳ : ಗಡೆಕಟ್ಟೆ, ನ್ಯಾಮತಿ ತಾಲ್ಲೂಕು

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 09-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.ಎಸ್.)**:

1. ಚಾಸಾ-2 ರವರು ನನ್ನ ಗಂಡನ ತಮ್ಮ. ಚಾಸಾ-3 ನನ್ನ ಗಂಡನ ತಮ್ಮನ ಹೆಂಡತಿ. ಚಾಸಾ-4 ನನ್ನ ಗಂಡನ ದೊಡ್ಡಪ್ಪ. ಚಾಸಾ-5 ನನ್ನ ಗಂಡನ ತಂದೆ ಮತ್ತು ಆರೋಪಿತಳ ಗಂಡ. ಆರೋಪಿಯು ಚಾಸಾ-5 ರವರ 2 ನೇ ಹೆಂಡತಿ. ಗಡೆಕಟ್ಟೆಯ ಸರ್ವೇ ನಂಬರ 36/2 ರ ಜಮೀನಿನಲ್ಲಿ ನಾವು ಮನೆ ಕಟ್ಟಿಕೊಂಡು ವಾಸವಿದ್ದೇವೆ. ನನ್ನ ಗಂಡನ ತಂದೆಯ ಮೊದಲನೇ ಹೆಂಡತಿಯ ಹೆಸರು ರುಕ್ಮೀಣಮ್ಮ. ಸದರಿಯವರು ತೀರಿಕೊಂಡಿದ್ದಾರೆ. ಆರೋಪಿತರ ಮನೆ ನಮ್ಮ ಮನೆಯ ಪಕ್ಕದಲ್ಲಿರುತ್ತದೆ. ಆರೋಪಿತಳ ಮನೆಯಲ್ಲಿ ಅವರ ಗಂಡ ಮತ್ತು ಅವರ ಮಗ ಮನೋಜರವರು ವಾಸವಿದ್ದಾರೆ. ಆರೋಪಿತರು ನನ್ನೊಂದಿಗೆ ಸಂಬಂಧ ಚೆನ್ನಾಗಿ ಇಟ್ಟುಕೊಂಡಿದ್ದರು. ನಂತರ ಆರೋಪಿಯು ತನ್ನ ಗಂಡನೊಂದಿಗೆ ಅನೈತಿಕ

ಸಂಬಂಧ ಇದೆ ಅಂತ ಹೇಳಿ ಜಗಳ ಶುರು ಮಾಡಿದರು. ಆಗ ನಮ್ಮ ಮತ್ತು ಆರೋಪಿಯ ಸಂಬಂಧಿಕರು ಬಂದು ಆರೋಪಿಗೆ ಸಮಾಧಾನ ಮಾಡಿ ಹೋದರು.

2. ದಿಃ 06-03-2023 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಾನು ನೆಲ ಸಾರಿಸುತ್ತಿರುವಾಗ ಆರೋಪಿಯು ಕೂಡಗೋಲನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಬಂದು ನನಗೆ " ನೀನು ನನ್ನ ಸಂಸಾರ ಹಾಳು ಮಾಡುತ್ತೀಯಾ ಹಾರ್ದಿಗಿತ್ತಿ ಬೋಸುಡಿ" ಅಂತ ಬೈದರು. ಅದಕ್ಕೆ ನಾನು ಆರೋಪಿಗೆ ಆ ತರ ಇಲ್ಲ ನೀನು ತಪ್ಪು ತಿಳಿದುಕೊಂಡಿದ್ದೀಯಾ ಅಂತ ಹೇಳಿದೆ. ಅದಕ್ಕೆ ಆರೋಪಿಯು ನನ್ನನ್ನು ನೆಲಕ್ಕೆ ಕೆಡವಿ ತಲೆಗೆ 05-06 ಬಾರಿ ಹೊಡೆದರು. ಆರೋಪಿಯು ನನಗೆ ಹೊಡೆಯಲು ಬಂದಾಗ ನಾನು ತಡೆದಾಗ ನನ್ನ ಎರಡು ಕೈಗೆ ಪೆಟ್ಟಾಯಿತು ಮತ್ತು ತಲೆಗೆ ಸಹ ಪೆಟ್ಟಾಗಿದೆ. ಆರೋಪಿಯು ನನಗೆ "ನಿನ್ನನ್ನು ಸಾಯಿಸುತ್ತೇನೆ " ಅಂತ ಹೇಳಿ ಬೆದರಿಕೆ ಹಾಕಿದರು. ಆಗ ನನ್ನ ಗಂಡನ ತಮ್ಮನಾದ ಚಾಸಾ-2, 3, 4 ರವರು ಬಂದು ನನ್ನನ್ನು ಉಪಚರಿಸಿ, ದಾವಣಗೆರೆಯ ಸಿ.ಜಿ. ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಅಲ್ಲಿಂದ ನನ್ನನ್ನು ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ 15 ದಿನಗಳ ಕಾಲ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಚಾಸಾ-2 ರಿಂದ 4 ರವರು ಬಂದಿರುವುದನ್ನು ನೋಡಿ ಆರೋಪಿಯು ಹಿಂದಿನ ಬಾಗಿಲಿನಿಂದ ಕೂಡಗೋಲನ್ನು ತೆಗೆದುಕೊಂಡು ಓಡಿ ಹೋದರು. ಆ ಕೂಡಗೋಲನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ಮು.ಮಾ.1 ಅಂತ ಗುರುತಿಸಲಾಯಿತು. ಕೈಗಳಿಗೆ ಗಾಯವಾಗಿರುವುದರಿಂದ ನನ್ನ ಹೆಬ್ಬೆಟ್ಟಿನ ಗುರುತು ಪಡೆದುಕೊಂಡಿದ್ದಾರೆ. ಈ ಬಗ್ಗೆ ನಾನು ಪೊಲೀಸರಿಗೆ ಮೆಗ್ಗಾಗ್ನ್ ಆಸ್ಪತ್ರೆಯಲ್ಲಿ ಹೇಳಿಕೆಯ ದೂರನ್ನು ಕೊಟ್ಟಿರುತ್ತೇನೆ. ದೂರನ್ನು ನಿಪಿ-1 ಅಂತ ಗುರುತಿಸಲಾಯಿತು. ನನ್ನ ತಲೆಗೆ 32-34 ಹೊಲಿಗೆ ಹಾಕಿರುತ್ತಾರೆ. ನನ್ನ ಬಲಗೈನ ನರ ತುಂಡಾಗಿದೆ ಅದಕ್ಕೆ ರಾಡ್ ಹಾಕಿದ್ದರೆ. ಸಾಕ್ಷಿದಾರರು ತನ್ನ ಬಲಗೈಗೆ ರಾಡ್ ಹಾಕಿರುವ ಜಾಗವನ್ನು

ತೋರಿಸಿರುತ್ತಾರೆ. ಅವರ ಎರಡು ಕೈಗಳನ್ನು ನ್ಯಾಯಾಲಯದಲ್ಲಿ ತೋರಿಸಿದ್ದು, ಕೈಗಳ ಮೇಲೆ ಗಾಯದ ಗುರುತುಗಳು ಇರುತ್ತವೆ.

3. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನಗೆ ಹೊನ್ನಾಳಿ ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋಗಿದ್ದರು ಮತ್ತು ಅಲ್ಲಿ ನ್ಯಾಯಾಧೀಶರ ಮುಂದೆ ನಾನು ಘಟನೆಯ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಕಡತದಲ್ಲಿ ಹೊನ್ನಾಳಿ ನ್ಯಾಯಾಲಯದ Envelop ಇದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ಓಪನ್ ಮಾಡಿ ನೋಡಲಾಗಿ ಅದರಲ್ಲಿ ಕಲಂ 164ರ ಹೇಳಿಕೆ ಇರುತ್ತದೆ. ಆ Envelop To.No.487/2023 ಇರುತ್ತದೆ. ಕಲಂ 164ರ ಹೇಳಿಕೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಅಂತ ಗುರುತಿಸಲಾಯಿತು. ಅದಕ್ಕೆ ನಾನು ಹೆಬ್ಬೆಟ್ಟಿನ ಗುರುತು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ಆರೋಪಿ ಪರ ವಕೀಲರು ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.